<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು.</u>

**<u>ಸೆಷನ್ಸ್ ಕೇಸ್ ನಂಬ್ರ 76/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಕೃಷ್ಣ ಕೆ. | <u>ಪ್ರಾಸಾಃ 4</u> |
| ತಂದೆಯ ಹೆಸರು | : | ರಾಮಾ. ಎಮ್ | <u>ಚಾಸಾಃ 2</u> |
| ಪ್ರಾಯ | : | 42 ವರ್ಷ | **<u>ದಿನಾಂಕಃ 07.02.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಟಿಪ್ಪರ್ ಚಾಲಕ | |
| ವಾಸಸ್ಥಳ | : | ಎಕ್ಕಾರು ಪಲ್ಲದಕೋಡಿ, ತೆಂಕೆಎಕ್ಕಾರು ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ, ಆತ ನಮ್ಮ ನೆರೆಕರೆಯವರು. ಈ ಪ್ರಕರಣದ ಮೃತ ಸರಿತಾ ಅವರ ಪರಿಚಯ ಇದೆ, ಅವರು ಆರೋಪಿಯ ಹೆಂಡತಿ. ಚಾ.ಸಾ.4 ರಾಹುಲ್ ಆರೋಪಿ ಹಾಗೂ ಮೃತ ಸರಿತಾಳ ಮಗ. ಚಾ.ಸಾ.3 ನಮ್ಮ ನೆರೆಕೆರೆಯವರು.

2. ಆರೋಪಿ ಮತ್ತು ಮೃತ ಸರಿತಾ ಮತ್ತು ಚಾ.ಸಾ.4, ಈ ಹಿಂದೆ ಚಾ.ಸಾ.12 ರವರಿಗೆ ಸೇರಿದ ತೆಂಕೆ ಎಕ್ಕಾರು ಗ್ರಾಮಾದ ಪಲ್ಲದ ಕೋಡಿಯಲ್ಲಿರುವ ಜಾಗದಲ್ಲಿ ಇದ್ದ ಶೆಡ್ಡಿನಲ್ಲಿ ವಾಸವಾಗಿದ್ದರು. ಆರೋಪಿ ಹಾಗೂ ಆತನ ಹೆಂಡತಿಗೆ ಕುಡಿಯುವ ಅಭ್ಯಾಸ ಇತ್ತು ಮತ್ತು ಕೆಲವೊಮ್ಮೆ ಜಗಳ ಮಾಡಿಕೊಳ್ಳುತ್ತಿದ್ದರು. ದಿನಾಂಕಃ 27.11.2022 ರಂದು ರಾತ್ರಿ 08.30 ಗಂಟೆಗೆ ನಾನು ಗಾಡಿ ನಿಲ್ಲಿಸಿ, ನಾನು ಮತ್ತು ನನ್ನ ಜೊತೆ ಇದ್ದ ಚಾ.ಸಾ.3ರವರು ಅಲ್ಲಿಂದ ನಡೆದುಕೊಂಡು ಹಾದು

ಹೋಗುವಾಗ ಆರೋಪಿಯ ಶೆಡ್ಡಿನ ಮುಂದೆ ಹೋಗುತ್ತಿರುವಾಗ, ಗಂಡ-ಹೆಂಡತಿಯ ಜಗಳ ಕೇಳಿಸುತ್ತಿತ್ತು ಮತ್ತು ಸರಿತಾ ಕೂಗಿಕೊಳ್ಳುತ್ತಿದ್ದರು. ಆಗ ಆರೋಪಿ ಅವಾಚ್ಯ ಶಬ್ದಗಳಿಂದ ಆಕೆಗೆ ಬೈಯ್ಯುತ್ತಿದ್ದರು ಮತ್ತು ಮರದ ರೀಪಿನ ತುಂಡಿನಿಂದ ಆಕೆಗೆ ಹೊಡೆಯುವುದನ್ನು ನಾನು ನೋಡಿದ್ದೇನೆ, ಆಗ ನಾನು ಬಿಡಿಸಲು ಹೋಗಿ ಅವರಿಗೆ ಬುದ್ದಿ ಮಾತು ಹೇಳಿರುತ್ತೇನೆ. ನಾನು ನೋಡಲಾಗಿ, ಸರಿತಾಳ ಕಣ್ಣಿನ ಬಳಿ ರಕ್ತ ಗಾಯ ಆಗಿತ್ತು. ನಂತರ ನಾನು ಆರೋಪಿಗೆ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದೆನು. ನಂತರ ನಾನು ನನ್ನ ಮನೆಗೆ ಹೋಗಿರುತ್ತೇನೆ.

3. ಮರುದಿನ ಬೆಳಿಗ್ಗೆ 07.30 ಗಂಟೆ ಸುಮಾರಿಗೆ ನಾನು ಮತ್ತು ಚಾ.ಸಾ.3 ನಮ್ಮ ಕೆಲಸಕ್ಕೆ ಅದೇ ದಾರಿಯಲ್ಲಿ ಹೋಗುವಾಗ, ಆರೋಪಿಯ ಮಗನಾದ ಚಾ.ಸಾ.4 ನಮ್ಮ ಬಳಿ ಓಡಿ ಬಂದು ಅಮ್ಮ ಮೃತಪಟ್ಟಿದ್ದಾಳೆ ಅಂತ ತಿಳಿಸಿದನು. ನಾವು ಶೆಡ್ ಒಳಗೆ ಹೋಗಿ ನೋಡಲಾಗಿ, ಸರಿತಾ ಅಂಗಾತ್ತವಾಗಿ ಮಲಗಿದ್ದು, ಆಕೆಯ ಮೈಮೇಲೆ ಚೂಡಿದಾರ ಪ್ಯಾಂಟ್ ಮಾತ್ರ ಇತ್ತು, ಟಾಪ್ ಇರಲಿಲ್ಲ. ಆಕೆಯ ಕಾಲಿಗೆ ಮತ್ತು ದೇಹದ ಎಲ್ಲಾ ಭಾಗಗಳಿಗೆ ರಕ್ತ ಗಾಯ ಅಗಿದ್ದನ್ನು ಕಂಡೆನು.

4. ನಂತರ ನಾನು ಮೃತ ಸರಿತಾಳ ತಮ್ಮನಾದ ಪ್ರಾ.ಸಾ.1ರವರ ಫೋನ್ ನಂಬರನ್ನು ಬೇರೆ ಕಡೆಯಿಂದ ಪಡೆದುಕೊಂಡು ಅವರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ ಮತ್ತು ಪೊಲೀಸರಿಗೂ ಸಹ ವಿಷಯ ತಿಳಿಸಿರುತ್ತೇನೆ. ನಂತರ ಪ್ರಾ.ಸಾ.1 ಮತ್ತು ಪೊಲೀಸರು ಸ್ಥಳಕ್ಕೆ ಬಂದರು ಹಾಗೂ ಪ್ರಾ.ಸಾ.1ರವರು ಪೊಲೀಸರಿಗೆ ದೂರು ನೀಡಿರುತ್ತಾರೆ.

5. ಬಜ್ಪೆ ಪೊಲೀಸು ನಿರೀಕ್ಷಕರು ಸ್ಥಳಕ್ಕೆ ಬಂದು ಮಧ್ಯಾಹ್ನ 01.00 ಗಂಟೆಯಿಂದ 03.00 ಗಂಟೆವರೆಗೆ ಸ್ಥಳ ಪರಿಶೀಲನೆ ಮಾಡಿ, ಬರವಣಿಗೆ ಮಾಡಿಕೊಂಡಿರುತ್ತಾರೆ. ಘಟನಾ ಸ್ಥಳವು ಆರೋಪಿ ಮತ್ತು ಮೃತ ಸರಿತಾ ವಾಸವಾಗಿದ್ದ ಶೆಡ್ಡಿನ ಹೊರಗಡೆ ಗಿಡಗಂಟಿಗಳಿದ್ದ ಸ್ಥಳದ ಬಳಿ ಆಗಿದೆ. ಘಟನಾ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿಕೊಟ್ಟಿದ್ದು, ಆ ಸಮಯದಲ್ಲಿ ಚಾ.ಸಾ.8(ಪ್ರಾ.ಸಾ.3) ಮತ್ತು ಚಾ.ಸಾ.9ರವರು ಸ್ಥಳದಲ್ಲಿ ಹಾಜರಿದ್ದರು. ಸದ್ರಿ ಸ್ಥಳದಲ್ಲಿ 2 ಹಲಗೆ ಮತ್ತು ಒಂದು ರೀಪಿನ ತುಂಡು ಇತ್ತು, ಅದಕ್ಕೆ ರಕ್ತ ತಾಗಿತ್ತು. ಸದ್ರಿ ಹಲಗೆ ಒಂದು 32 ಇಂಚು ಉದ್ದ ಮತ್ತು 9 ಇಂಚು ಅಗಲ ಇತ್ತು, ಇನ್ನೊಂದು ಹಲಗೆ 30 ಇಂಚು ಉದ್ದ ಮತ್ತು 8 ಇಂಚು ಅಗಲ ಇತ್ತು ಹಾಗೂ ರೀಪು 22 ಇಂಚು ಉದ್ದ 2 ಇಂಚು ಅಗಲ ಇತ್ತು. ಸದ್ರಿ 3 ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಹಾಕಿ, ನನ್ನ, ಚಾ.ಸಾ.8 ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 1 ರಿಂದ 3 ಅಂತ ಗುರುತು ಹಾಕಿರುತ್ತಾರೆ. ನಂತರ ಅದರ ಪಕ್ಕದಲ್ಲಿ ಹಂಚಿನ ಚೂರು ಇತ್ತು, ಅದರಲ್ಲೂ ಸಹ ರಕ್ತದ ಕಲೆ ಇತ್ತು. ಅಲ್ಲಿ ಗಿಡಗಂಟೆಗಳಲ್ಲಿ ರಕ್ತದ ಕಲೆ ಇತ್ತು. ಅವುಗಳ ಪೈಕಿ 9 ಗಿಡಗಂಟೆಗಳನ್ನು ಸುಮಾರು ಒಂದು ಅಡಿ ಉದ್ದದ್ದೂ, ತುಂಡು ಮಾಡಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನನ್ನ, ಚಾ.ಸಾ.8 ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 4 ಮತ್ತು 5 ಅಂತ ಕ್ರಮವಾಗಿ ಗುರುತು ಹಾಕಿರುತ್ತಾರೆ. ನಂತರ ಅಲ್ಲಿ ಇದ್ದ ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತ ಇಲ್ಲದ ಮಣ್ಣನ್ನು, ಪ್ರತ್ಯೇಕ ಡಬ್ಬಕ್ಕೆ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ಸೀಲ್ ಹಾಕಿ ನನ್ನ, ಚಾ.ಸಾ.8 ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ 6 ಮತ್ತು 7 ಅಂತ

ಕ್ರಮವಾಗಿ ಗುರುತು ಹಾಕಿರುತ್ತಾರೆ. ನಂತರ ಶೆಡ್ಡಿನ ಒಳಗೆ ಮೃತ ಸರಿತಾಳ ಚೂಡಿದಾರ ಟಾಪ್ ಇತ್ತು, ಅದು ಕೆಂಪು ಬಣ್ಣದು ಅದಕ್ಕೂ ಸಹ ರಕ್ತದ ಕಲೆ ಆಗಿತ್ತು. ಅದನ್ನು ಪ್ಲಾಸ್ಟಿಕ್ ತೊಟ್ಟೆ (ಕವರಿನಲ್ಲಿ) ಯಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಹಾಕಿ ನನ್ನ, ಚಾ.ಸಾ.8 ಮತ್ತು ಚಾ.ಸಾ.9 ರವರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಶೆಡ್ಡಿನ ಒಳಗಡೆ ವಶಪಡಿಸಿಕೊಂಡ ಚೂಡಿದಾರದ ಟಾಪನ್ನು ಹಿಂದಿನ ದಿನ ಆರೋಪಿ ಹಲ್ಲೆ ನಡೆಸುವ ಸಮಯ ಸರಿತಾಳು ಧರಿಸಿದ್ದಳು. ಸ್ಥಳದಲ್ಲಿ ಪೊಲೀಸರು ತಯಾರಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಸದ್ರಿ ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು ಈಗಾಗಲೇ ಗುರುತಿಸಲಾಗಿದೆ. ಸದ್ರಿ ಫೋಟೋದಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ಗುರುತಿಸುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ವಶಕ್ಕೆ ಪಡೆದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮು.ಮಾ.1 ರಿಂದ ಮು.ಮಾ.8 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

6. ಆರೋಪಿಯು ಮೃತ ಸರಿತಾಳಿಗೆ ಹೊಡೆಯುವುದನ್ನು ನಾನು ನೋಡಿದ್ದೇನೆ, ಸದ್ರಿ ಸ್ಥಳ ರಸ್ತೆಯ ಬದಿ ಇದ್ದು, ಅಲ್ಲಿ ಬೀದಿ ದೀಪ ಇತ್ತು.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>-**

7. ನಾನು ವಾಸ ಮಾಡುವ ಮನೆಯಿಂದ ಆರೋಪಿ ವಾಸ ಮಾಡುವ ಶೆಡ್ಡಿನಿಂದ ಸುಮಾರು 20-30 ಅಡಿ ಅಂತರದಲ್ಲಿದೆ. ನಾನು ಮತ್ತು ಆರೋಪಿ ಒಟ್ಟಿಗೆ ಕೆಲಸ ಮಾಡುವುದಿಲ್ಲ. ಆರೋಪಿಯು ನಮ್ಮ ಮನೆಗೆ ಬರುತ್ತಾ ಹೋಗುತ್ತಾ ಇದ್ದರು ಎಂದರೆ ಸರಿ. ಆರೋಪಿ ಗಾರೆ ಕೆಲಸ ಮಾಡಿಕೊಂಡಿದ್ದರು. ಆರೋಪಿ ಮತ್ತು ಆತನ ಹೆಂಡತಿ ಅನ್ಯೋನ್ಯವಾಗಿ ಸಂಸಾರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಮೃತ ಸರಿತಾಳಿಗೆ ಶರಾಬು ಕುಡಿಯಬಾರದು ಅಂತ ಬುದ್ಧಿವಾದ ಹೇಳಿಲ್ಲ. ನಾನು ವಾಸ ಮಾಡುವ ಮನೆ ನನ್ನ ಸ್ವಂತ ಮನೆ ಮತ್ತು ಜಾಗ. ಆರೋಪಿ ವಾಸ ಮಾಡುವ ಜಾಗ ಮತ್ತು ಶೆಡ್ ಆತನದ್ದಲ್ಲ.

8. ನಮಗೆ ಸರಕಾರದಿಂದ ಮನೆ ಕೊಡಿಸಿ ಅಂತ ಸ್ಥಳೀಯರು ಪ್ರತಿಭಟನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದ್ರಿ ಪ್ರತಿಭಟನಾ ಸಂಘದ ಅಧ್ಯಕ್ಷ ಈ ಪ್ರಕರಣದ ಆರೋಪಿಯಾಗಿದ್ದ ಎಂದರೆ ಸರಿಯಲ್ಲ. ಚಾ.ಸಾ.12ರವರಿಗೆ ಆರೋಪಿಯ ಮೇಲೆ ವೈಮನಸ್ಸು ಇತ್ತು ಮತ್ತು ಆರೋಪಿಯು ವಾಸ ಮಾಡುತ್ತಿದ್ದ ಜಾಗವನ್ನು ಬಿಟ್ಟು ಹೋಗಬೇಕು ಎನ್ನುವ ಮನಸ್ಸಿತ್ತು ಎಂದರೆ ಸರಿಯಲ್ಲ. ನೆರೆಕರೆಯವರಿಗೆ ಆರೋಪಿಯನ್ನು ಸದ್ರಿ ಪ್ರತಿಭಟನೆಯಿಂದ ಬೇಸತ್ತು ಆತನನ್ನು ಅಲ್ಲಿಂದ ಓಡಿಸಬೇಕು ಎನ್ನುವ ಹುನ್ನಾರ ಇತ್ತು ಎಂದರೆ ಸರಿಯಲ್ಲ. ಪ್ರಾ.ಸಾ.3 ನನ್ನ ಅಣ್ಣ ಮತ್ತು ಆತ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರು. ನನ್ನ ಅಣ್ಣ ಗ್ರಾಮ ಪಂಚಾಯತ್ ಅಧ್ಯಕ್ಷನಾಗಿರುವಾಗಲೂ ಆರೋಪಿ ಹೋಗಿ

ಪ್ರತಿಭಟನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ನಾವೆಲ್ಲರೂ ಸೇರಿಕೊಂಡು ಒಂದು ಸುಳ್ಳು ಕಥೆ ಸೃಷ್ಟಿಸಿ, ಆರೋಪಿಯನ್ನು ಜೈಲಿಗಟ್ಟಿದ್ದೇವೆ ಎಂದರೆ ಸರಿಯಲ್ಲ.

9. ಆರೋಪಿಯ ಮನೆ ಇರುವ ಜಾಗದ ಮುಂದೆ ಸ್ವಲ್ಪ ತಗ್ಗು ಪ್ರದೇಶ ಇದೆ. ಆರೋಪಿ ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಆ ರೀತಿ ನಾನು ಸೃಷ್ಟಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸರಿತಾಳಿಗೆ ಕುಡಿಯುವ ಅಭ್ಯಾಸ ಇದ್ದದ್ದರಿಂದ ಆಕೆ ಕುಡಿದ ಅಮಲಿನಲ್ಲಿ ತಗ್ಗು ಪ್ರದೇಶಕ್ಕೆ ಬಿದ್ದು, ಗಾಯಗೊಂಡು ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ. ಆ ರೀತಿ ಬಿದ್ದು ಆಕೆಗೆ ಗಿಡಗಂಟಿಗಳು ತಾಗಿ ಗಾಯ ಆಗಿದೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಹೊಸದಾಗಿವೆ ಮತ್ತು ಈ ಕೇಸಿಗೋಸ್ಕರ ಸೃಷ್ಟಿಸಿದ ವಸ್ತುಗಳು ಎಂದರೆ ಸರಿಯಲ್ಲ. ವಶಪಡಿಸಿಕೊಂಡ ವಸ್ತುಗಳಲ್ಲಿ ರಕ್ತ ಕಲೆ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ಈ ಕೇಸಿಗೆ ಸಂಬಂಧಪಟ್ಟದ್ದಲ್ಲ ಮತ್ತು ಅದರಲ್ಲಿ ಕಾಣುತ್ತಿರುವ ಜಾಗ ಪ್ರಕರಣದ ಘಟನಾ ಸ್ಥಳ ಅಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ರಾಜಕೀಯ ವ್ಯಕ್ತಿ ಮತ್ತು ನಾವೆಲ್ಲರೂ ಸೇರಿ ಆರೋಪಿಯ ಮೇಲೆ ಸುಳ್ಳು ದೂರು ಕೊಡಿಸಿ, ಸುಳ್ಳು ಪ್ರಕರಣಕ್ಕೆ ಪೂರಕ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಪ್ರಕರಣಕ್ಕೂ, ಆರೋಪಿಗೂ ಮತ್ತು ಮು.ಮಾ.1 ರಿಂದ ಮು.ಮಾ.10ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಯಾರನ್ನೂ ನೋಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.